RNU AIR DHARWAD

# SEPTEMBER 17, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **"ಸ್ವಭಾವ–ಸ್ವಚ್ಛತೆ, ಸಂಸ್ಕಾರ–ಸ್ವಚ್ಛತೆ" ಧ್ಯೇಯ;** ಇಂದಿನಿಂದ ಸ್ವಚ್ಛತೆಯೇ ಸೇವೆ ಪಾಕ್ಷಿಕ ಆರಂಭ.

- **ಇಂದು ಕಲ್ಯಾಣ ಕರ್ನಾಟಕ ವಿಮೋಚನಾ ಉತ್ಸವ;** ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ, ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ.

- **ಜೀವನ ಮೌಲ್ಯಗಳೊಂದಿಗೆ** ಸಂಯೋಜಿಸಿ, ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಬೇಕು – ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್.
- **ಉತ್ತರಕನ್ನಡ ಜಿಲ್ಲೆ, ಶಿರಸಿಯಲ್ಲಿ ಇಂದು,** ಸುಸ್ಥಿರ ಇಂಧನ ಅಭಿವೃದ್ಧಿ ಕಾರ್ಯಾಗಾರ; ಜೈವಿಕ ಇಂಧನ ತಜ್ಞ ವೈ.ಬಿ.ರಾಮಕೃಷ್ಣ ಭಾಗಿ.

<><><>

**ಈಗ ವಾರ್ತೆಗಳ ವಿವರ**

<><><>

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 50 ಸೆಕೆಂದುಗಳು**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಮಹತ್ವಾಕಾಂಕ್ಷೆಯ, ಸ್ವಚ್ಛ ಭಾರತ ಅಭಿಯಾನದ 10ನೇ ವಾರ್ಷಿಕೋತ್ಸವವನ್ನು, ಮಹಾತ್ಮ ಗಾಂಧೀಜಿಯವರ 155ನೇ ಜಯಂತಿಯ ಸಂದರ್ಭದಲ್ಲಿ ದೇಶಾದ್ಯಂತ ಆಚರಿಸಲಾಗುತ್ತಿದೆ. ಸ್ವಚ್ಛತಾ ಕಿ ಭಾಗೀದಾರ, ಸಂಪೂರ್ಣ ಸ್ವಚ್ಛತಾ ಚಟುವಟಿಕೆ ಹಾಗೂ ಸಫಾಯಿ ಮಿತ್ರ ಸುರಕ್ಷಾ ಎಂಬ, ಮೂರು ವಿ ʼಯಗಳನ್ನು ಕೇಂದ್ರೀಕರಿಸಿ, 2024ನೇ ಸಾಲಿನ ಸ್ವಚ್ಛತೆಯೇ ಸೇವೆ ಪಾಕ್ಷಿಕವನ್ನು, ಜನಾಂದೋಲನವಾಗಿ ಸಂಘಟಿಸಲಾಗಿದೆ.

<><><>

**"ಸ್ವಭಾವ–ಸ್ವಚ್ಛತೆ, ಸಂಸ್ಕಾರ–ಸ್ವಚ್ಛತೆ" ಧ್ಯೇಯದೊಂದಿಗೆ,** ಇಂದಿನಿಂದ ಅಕ್ಟೋಬರ್ 2ರ ಗಾಂಧಿ ಜಯಂತಿಯ ಸ್ವಚ್ಛತಾ ದಿನದ ವರೆಗೆ, ಸ್ವಚ್ಛತಾ ಹೀ ಸೇವಾ ಪಾಕ್ಷಿಕ ರಾಜ್ಯಾದ್ಯಂತ ಜರುಗಲಿದೆ.

<><><>

ರಾಜ್ಯದ 31 ಜಿಲ್ಲಾಡಳಿತಗಳು, ತಾಲೂಕು ಆಡಳಿತಗಳ ಸಹಯೋಗದಲ್ಲಿ, ವಿವಿಧ ಇಲಾಖೆಗಳ ಸಮನ್ವಯದೊಂದಿಗೆ, ಸ್ವಚ್ಛತಾ ಪಾಕ್ಷಿಕಕ್ಕೆ ಇಂದು ಚಾಲನೆ ನೀಡಲಿವೆ. www.swachhata'hi'seva.com ನಲ್ಲಿ, ಸೇವಾ ಚಟುವಟಿಕೆಗಳ ಚಿತ್ರ ಹಾಗೂ ಶೀರ್ಷಿಕೆ ಸೇರಿಸಿ, ಹಂಚಿಕೊಳ್ಳುವಂತೆ, ಪ್ರಧಾನಮಂತ್ರಿ ಕೋರಿದ್ದಾರೆ.

<><><>

**ಇಂದು ಕಲ್ಯಾಣ ಕರ್ನಾಟಕ ವಿಮೋಚನಾ ಉತ್ಸವ.** ಕಲಬುರಗಿ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ, ಕಲ್ಯಾಣ ಕರ್ನಾಟಕ ವಿಮೋಚನಾ ಉತ್ಸವ ದಿನಾಚರಣೆ-2024ರ ಅಂಗವಾಗಿ, ಇಂದು ಬೆಳಗ್ಗೆ 9 ಗಂಟೆಗೆ, ರಾಷ್ಟ್ರ ಧ್ವಜಾರೋಹಣ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸವನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ.

<><><>

**ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ** ಡಾಕ್ಟರ್ ಶರಣ ಪ್ರಕಾಶ್ ಪಾಟೀಲ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು, ರಾಯಚೂರು ಲೋಕಸಭಾ ಸದಸ್ಯ ಜಿ.ಕುಮಾರ ನಾಯಕ್, ರಾಯಚೂರಿನಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ** ಹಾಗೂ ಉದ್ಯೋಗಾಕಾಂಕ್ಷಿ ಯುವಜನರ ಉದ್ಯೋಗಾವಕಾಶಗಳ ಖಾತ್ರಿಗೆ, ಪ್ರತ್ಯೇಕ ಸಚಿವಾಲಯ ರಚನೆ ಬಗ್ಗೆ, ಇಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಲಬುರಗಿಯಲ್ಲಿ, ಸುದ್ದಿಗಾರರಿಗೆ ತಿಳಿಸಿದ್ದಾರೆ.

<><><>

**ಕಲಬುರಗಿ ಜಿಲ್ಲೆ ಉಸ್ತುವಾರಿ ಸಚಿವ** ಪ್ರಿಯಾಂಕ್ ಖರ್ಗೆ, ಸುದ್ದಿಗೋಷ್ಠಿ ನಡೆಸಿ, ಕಲಬುರಗಿಯಲ್ಲಿ ಇಂದು ದಶಕದ ಬಳಿಕ ನಡೆಯಲಿರುವ, ಸಚಿವ ಸಂಪುಟ ಸಭೆಯಲ್ಲಿ, ಹಿಂದುಳಿದ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ, ನೀಲನಕ್ಷೆ ರೂಪಿಸುವ ಉದ್ದೇಶ ಹೊಂದಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಶಾಸಕರ ವಿವಿಧ ಬೇಡಿಕೆಗಳು ಮತ್ತು ಅನುದಾನ ಒದಗಿಸುವ ಕುರಿತು, ಮಹತ್ವದ ಚರ್ಚೆ ನಡೆಯಲಿದೆ, ಎಂದರು.

<><><>

**ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾಕ್ಟರ್** ಶರಣಪ್ರಕಾಶ್ ಪಾಟೀಲ ಮಾತನಾಡಿ, ಮುಂದಿನ ಎರಡು ವರ್ಷಗಳಲ್ಲಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿವಿಧ ಇಲಾಖೆಗಳ 25 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಗುರಿ ಹೊಂದಲಾಗಿದೆ. ಸದ್ಯದಲ್ಲೇ ರಾಜ್ಯಾದ್ಯಂತ ಆರೂವರೆ ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಸಚಿವ ಸಂಪುಟ ಒಪ್ಪಿಗೆ ನೀಡುವ ಕಾರ್ಯಸೂಚಿ ಇದೆ ಎಂದು, ತಿಳಿಸಿದರು.

<><><>

**ಇಂದು ಸಂಜೆ 4 ಗಂಟೆಗೆ,** ಕಲಬುರಗಿ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ, ಸಚಿವ ಸಂಪುಟ ಸಭೆ ಜರುಗಲಿದ್ದು, ಮುಖ್ಯಮಂತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

**ರಾಜ್ಯದ ಸಂಸದೀಯ ವ್ಯವಹಾರ** ಹಾಗೂ ಕಾನೂನು ಖಾತೆ ಸಚಿವ, ಎಚ್.ಕೆ.ಪಾಟೀಲ ಅವರು, ಇಂದು ಬೆಳಗ್ಗೆ 9 ಗಂಟೆಗೆ, ಕಲಬುರಗಿ ಪೊಲೀಸ್ ಕವಾಯತು ಮೈದಾನದಲ್ಲಿ, ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಖಾಯಂ ಸಂಚಾರಿ ಪೀಠವನ್ನು, ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಪ್ರವಾಸೋದ್ಯಮ ಅಧಿಕಾರಿಗಳೊಂದಿಗೆ ಸಭೆ ನಡೆಸುವರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಧುನಿಕ ಜ್ಞಾನವನ್ನು, ಜೀವನ ಮೌಲ್ಯಗಳೊಂದಿಗೆ** ಸಂಯೋಜಿಸಿ, ಶಿಕ್ಷಣ ವ್ಯವಸ್ಥೆಯನ್ನು ಬಲ ಪಡಿಸುವುದು ಎಲ್ಲರ ನೈತಿಕ ಕರ್ತವ್ಯ ಎಂದು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತೆ ಮಂಡಳಿ – ನ್ಯಾಕ್‌ನ 30ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಭಾರತದ ಉನ್ನತ ಶಿಕ್ಷಣ ವ್ಯವಸ್ಥೆ, ಸಾವಿರದ 700 ವಿಶ್ವವಿದ್ಯಾಲಯಗಳು 45 ಸಾವಿರ ಮಹಾವಿದ್ಯಾಲಯಗಳನ್ನು ಹೊಂದಿರುವ, ವಿಶ್ವದ ಅತೀ ದೊಡ್ಡ ಶಿಕ್ಷಣ ವ್ಯವಸ್ಥೆಗಳಲ್ಲಿ ಒಂದಾಗಿದೆ ಎಂದು, ರಾಜ್ಯಪಾಲರು ಹೇಳಿದರು.

<><><>

**ನ್ಯಾಕ್ ಕಾರ್ಯಕಾರಿಣಿ ಮಂಡಳಿ ಅಧ್ಯಕ್ಷ** ಪ್ರೊಫೆಸರ್ ಅನಿಲ್ ಸಹಸ್ರಬುದ್ಧೆ, ನಿರ್ದೇಶಕ ಗಣೇಶನ್ ಕಣ್ಣಬೀರನ್, ಶಿಕ್ಷಣ ತಜ್ಞರಾದ ಪ್ರೊಫೆಸರ್ ಎಂ.ಕೆ.ಶ್ರೀಧರ್, ಡಾಕ್ಟರ್ ಎಚ್.ಆರ್.ನಾಗೇಂದ್ರ ಗುರೂಜಿ ಪಾಲ್ಗೊಂಡಿದ್ದರು.

<><><>

**ಪ್ರಧಾನಮಂತ್ರಿ ಸೂರ್ಯ ಯೋಜನೆ ಸದುಪಯೋಗವನ್ನು** ಮಲೆನಾಡಿನ ರೈತರು ಪಡೆಯಲು ಅನುವಾಗುವಂತೆ, ಮಲೆನಾಡು ಪರಿಸರಸ್ನೇಹಿ ಇಂಧನ ನೀತಿ ರೂಪಿಸುವಂತೆ ಹಾಗೂ ಸೋಲಾರ್ ಮಿಷನ್ ರಾಜ್ಯದಲ್ಲಿ ಸ್ಥಾಪಿಸುವಂತೆ ಹಕ್ಕೊತ್ತಾಯ ಮಂಡಿಸಲು, ಇಂದು ಬೆಳಗ್ಗೆ 10.30ಕ್ಕೆ ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ ಸುಸ್ಥಿರ ಇಂಧನ ಅಭಿವೃದ್ಧಿ ಕಾರ್ಯಾಗಾರ ಆಯೋಜಿತವಾಗಿದೆ. ರಾಷ್ಟ್ರೀಯ ಜೈವಿಕ ಇಂಧನ ತಜ್ಞ ಡಾಕ್ಟರ್ ವೈ.ಬಿ.ರಾಮಕೃಷ್ಣ ಅವರು ಪಾಲ್ಗೊಂಡು ಮಾರ್ಗದರ್ಶನ ಮಾಡಲಿದ್ದಾರೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ ಕಾರ್ಯಾಗಾರದ ಸಂಯೋಜಕ ಅನಂತ್ ಹೆಗಡೆ ಅಶೀಸರ.

<><><>

**ಅನಂತ ಹೆಗಡೆ ಅಶೀಸರ ಧ್ವನಿ 40 ಸೆಕೆಂದುಗಳು**

<><><>

**'ಈದ್ ಮಿಲಾದ್ ಹಬ್ಬ'ವನ್ನು,** ರಾಜ್ಯಾದ್ಯಂತ ಸಡಗರ, ಸಂಭ್ರಮ ಹಾಗೂ ಶ್ರದ್ಧಾ ಭಕ್ತಿಯಿಂದ ಮುಸ್ಲಿಂ ಬಾಂಧವರು, ಆಚರಿಸಿದರು. **ಪ್ರವಾದಿ ಮಹಮದ್ ಪೈಗಂಬರ್** ಜನ್ಮ ದಿನದ ಹಿನ್ನೆಲೆ, ಈದ್ ಆಚರಣೆ ಅಂಗವಾಗಿ, ಪ್ರಮುಖ ಪ್ರಾರ್ಥನಾ ಮಂದಿರಗಳಲ್ಲಿ ಮೌಲೀದ್ ಪಾರಾಯಣ, ಕುರಾನ್ ಪಠಣ ಹಾಗೂ ಈದ್ಗಾಗಳಲ್ಲಿ ಸಾಮೂಹಿಕ ನಮಾಜ್ ನಡೆಯಿತು. **ಮುಸ್ಲಿಂ ಬಾಂಧವರು** ಈದ್ ಶುಭಾಶಯ ಪರಸ್ಪರ ಕೋರಿ, ಸಂಭ್ರಮಿಸಿದರು.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆಯ,** ದೊಡ್ಡಬಳ್ಳಾಪುರ ಸೇರಿದಂತೆ, ರಾಜ್ಯದ ಹಲವು ಕಡೆ, ಮೊಹಮ್ಮದ್ ಪೈಗಂಬರ್ ಹಾಗೂ ಮೆಕ್ಕಾದ ಸ್ತಬ್ಧಚಿತ್ರಗಳನ್ನು, ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಗಣ್ಯರು ಶುಭಾಶಯ ಕೋರಿದರು.

<><><>

**ಪುಣೆಯಿಂದ ಹುಬ್ಬಳ್ಳಿಗೆ ಸಂಚಾರ ಆರಂಭಿಸಿದ,** ವಂದೇ ಭಾರತ್ ಎಕ್ಸ್‌ಪ್ರೆಸ್ ನಮೋ ರ್‍ಯಾಪಿಡ್ ವಿಶೇ ' ರೈಲಿಗೆ, ಸಾರ್ವಜನಿಕರಿಂದ ಅಭೂತಪೂರ್ವ ಸ್ವಾಗತ ದೊರೆತಿದ್ದು, ಬೆಳಗಾವಿಯಲ್ಲಿ ನಡೆದ ಸಮಾರಂಭದಲ್ಲಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹಸಿರು ನಿಶಾನೆ ತೋರಿ, ಚಾಲನೆ ನೀಡಿದರು. ಬಳಿಕ ಮಾತನಾಡಿದ ಸಚಿವ ವಿ.ಸೋಮಣ್ಣ ಅವರು, ಕಳೆದ ಹತ್ತು ವ 'ಗಳ ಅವಧಿಯಲ್ಲಿ, ರಾಜ್ಯದಲ್ಲಿ ಸಾವಿರದ 560 ನೂತನ ರೈಲ್ವೆ ಮಾರ್ಗಗಳನ್ನು ನಿರ್ಮಿಸಲಾಗಿದೆ. 2 ಸಾವಿರದ 500 ರೈಲ್ವೆ ಮಾರ್ಗಗಳಿಗೆ ವಿದ್ಯುದೀಕರಣ ವ್ಯವಸ್ಥೆ ಕಲ್ಪಿಸಲಾಗಿದೆ. ಅಮೃತ ಭಾರತ ಯೋಜನೆಯಡಿ ಸಾವಿರದ 320 ರೈಲು ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದರು. ಬೆಳಗಾವಿ ಧಾರವಾಡ ಮಧ್ಯೆ, 927 ಕೋಟಿ ರೂಪಾಯಿ ವೆಚ್ಚದಲ್ಲಿ, 79 ಕಿಲೋ ಮೀಟರ್

ಉದ್ದದ ನೇರ ನೂತನ ರೈಲು ಮಾರ್ಗವನ್ನು, ರೂಪಿಸಲು ಅಗತ್ಯವಿರುವ 800 ಎಕರೆ ಭೂಮಿಯನ್ನು ರಾಜ್ಯ ಸರ್ಕಾರ ಮುಂದಿನ ಮೂರು ತಿಂಗಳೊಳಗೆ ಒದಗಿಸಲಿದೆ ಎಂದು ಸಚಿವ ವಿ ಸೋಮಣ್ಣ ತಿಳಿಸಿದರು.

<><><>

**ಹುಬ್ಬಳ್ಳಿ ಸಾಹಿತ್ಯ ಭಂಡಾರದ, ಕೀರ್ತಿಶೇಷ ಮ.ಅನಂತಮೂರ್ತಿ** ಅವರ, 26ನೇ ಪುಣ್ಯತಿಥಿ ನಿಮಿತ್ತ, ಇಂದು ಸಂಜೆ 5.30ಕ್ಕೆ ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ, ಹಿರಿಯ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಪಾಲ್ಗೊಳ್ಳುವರು. ಬೆಂಗಳೂರಿನ ಭಾರತ ದರ್ಶನ ಪ್ರಕಾಶನ ಸಂಸ್ಥೆಗೆ ಗೌರವಾರ್ಪಣೆ ಹಾಗೂ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

<><><>

**ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ** ಆಯೋಜಿತ, ಕರ್ನಾಟಕ ರಾಜ್ಯ ಅಂತರ್ ಜಿಲ್ಲಾ ಜ್ಯೂನಿಯರ್ ಮತ್ತು 23 ವರ್ಷದ ಒಳಗಿನವರ, ಅಥ್ಲೆಟಿಕ್ಸ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸ್ಪರ್ಧಿಗಳು ಪಾರಮ್ಯ ಮೆರೆದರು. 23 ವರ್ಷದೊಳಗಿನ ಪುರುಷರ ಹ್ಯಾಮರ್ ಥ್ರೋನಲ್ಲಿ ಕೊಪ್ಪಳದ ಸಚಿನ್ ಪ್ರಥಮ ಸ್ಥಾನ, ಟ್ರಿಪಲ್ ಜಂಪ್‌ನಲ್ಲಿ ಯಶಸ್ ಗೌಡ ಹಾಗೂ ಸಾವಿರದ 500 ಮೀಟರ್ ಓಟದಲ್ಲಿ ಯಾದಗಿರಿಯ ಕೆ.ಲೋಕೇಶ್ ಹಾಗೂ ಡಿಸ್ಕಸ್ ಥ್ರೋನಲ್ಲಿ ದಕ್ಷಿಣ ಕನ್ನಡದ ನಾಗೇಂದ್ರ ಅಣ್ಣಪ್ಪ ಪ್ರಥಮ ಸ್ಥಾನದೊಂದಿಗೆ ಕೂಟ ದಾಖಲೆಗಳನ್ನು ನಿರ್ಮಿಸಿದ್ದಾರೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಭಗವಾನ್ ಶ್ರೀ ವಿಶ್ವಕರ್ಮ ಅವರ** ಜಯಂತಿಯನ್ನು, ಇಂದು ರಾಜ್ಯಾದ್ಯಂತ ಆಯೋಜಿಸಲಾಗಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ** ಅವರ, ಜನ್ಮ ದಿನದ ಪ್ರಯುಕ್ತ, ಇಂದು ಬೆಳಗ್ಗೆ 10.30ಕ್ಕೆ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ, ಜಗನ್ನಾಥ ಭವನದಲ್ಲಿ, ಚಿತ್ರಕಲಾ ಶಿಬಿರ ಜರುಗಲಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ** 3ನೇ ಅವಧಿಯ ಕೇಂದ್ರದ ಎನ್.ಡಿ.ಎ. ಸರ್ಕಾರಕ್ಕೆ ಇಂದಿಗೆ, ನೂರನೇ ದಿನದ ಸಂಭ್ರಮ.

<><><>

**ದಿ. ಧಾರವಾಡ ಡಿವಿಜನ್ ಪೋಸ್ಟಲ್ ಎಂಪ್ಲಾಯಿಸ್** ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ, ಶತಮನೋತ್ಸವದ ಹಿನ್ನೆಲೆ, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ವಿಶೇ ' ಅಂಚೆ ಲಕೋಟೆ ಬಿಡುಗಡೆ ಮಾಡಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **"ಸ್ವಭಾವ-ಸ್ವಚ್ಛತೆ, ಸಂಸ್ಕಾರ-ಸ್ವಚ್ಛತೆ" ಧ್ಯೇಯ;** ಇಂದಿನಿಂದ ಸ್ವಚ್ಛತೆಯೇ ಸೇವೆ ಪಾಕ್ಷಿಕ ಆರಂಭ.

- **ಇಂದು ಕಲ್ಯಾಣ ಕರ್ನಾಟಕ ವಿಮೋಚನಾ ಉತ್ಸವ;** ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ, ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ.

- **ಜೀವನ ಮೌಲ್ಯಗಳೊಂದಿಗೆ** ಸಂಯೋಜಿಸಿ, ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಬೇಕು – ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್.
- **ಉತ್ತರಕನ್ನಡ ಜಿಲ್ಲೆ, ಶಿರಸಿಯಲ್ಲಿ ಇಂದು,** ಸುಸ್ಥಿರ ಇಂಧನ ಅಭಿವೃದ್ಧಿ ಕಾರ್ಯಾಗಾರ; ಜೈವಿಕ ಇಂಧನ ತಜ್ಞ ವೈ.ಬಿ.ರಾಮಕೃಷ್ಣ ಭಾಗಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**